ಕನ್ನಡ ವ್ಯಾಕರಣ

1. ವ್ಯಂಜನಗಳಿಗೆ ಸ್ವರಗಳನ್ನು ಸೇರಿಸಿದಾಗ ಉಂಟಾಗುವ ಅಕ್ಷರಗಳೇ ----------

ಅ) ಯೋಗವಾಹಗಳು

ಆ) ಗುಣಿತಾಕ್ಷರಗಳು

ಇ) ದೀರ್ಘಸ್ವರಗಳು

ಈ) ಅನುನಾಸಿಕಗಳು

2. ಮ್ + ಅ – ನ್ + ಎ –ಯ್ + ಅ – ಲ್ + ಲ್ – ಇ = ----------

ಅ) ಮನದಲ್ಲ

ಆ) ಮೌನದಲ್ಲಿ

ಇ) ಮನೆಯಲ್ಲಿ

ಈ) ಮರೆಯಲ್ಲಿ

3. **ಅರಮನೆ** ಈ ಪದದಲ್ಲಿರುವ ಅವರ್ಗೀಯ ವ್ಯಂಜನಾಕ್ಷರ ----------

ಅ) ಅ

ಆ) ರ

ಇ) ಮ

ಈ) ನ

4. ಅನುನಾಸಿಕಾಕ್ಷರಗಳ ಸಂಖ್ಯೆ --------

ಅ) 5

ಆ) 4

ಇ) 3

ಈ) 2

5. ವಿಜಾತಿಯ ಸಂಯುಕ್ತಾಕ್ಷರದ ಪದಕ್ಕೆ ಉದಾಹರಣೆ ---------

ಅ) ಮತ್ತೆ

ಆ) ಆಪ್ತ

ಇ) ಅಮ್ಮ

ಈ) ಅಪ್ಪ

6. **ಸಂಯುಕ್ತ** ಪದದ ಅರ್ಥ---------

ಅ) ಚೆನ್ನಾಗಿ ಸೇರಿಸಿದ

ಆ) ವಿಭಾಗಿಸಿದ

ಇ) ಸಂಚರಿಸಿದ

ಈ) ಸಂಕುಚಿತ

7. **ಭಾಗ್ಯ** ಈ ಪದವನ್ನು ಗುಣಿತಾಕ್ಷರದ ಪ್ರಕಾರ ಬಿಡಿಸಿದಾಗ ----------

ಅ) ಭ್ + ಆ- ಯ್ + ಗ್ + ಅ

ಆ) ಭ್ + ಆ – ಗ್ + ಅ + ಯ್

ಇ) ಭ್ + ಆ – ಗ್ ಯ್ + ಅ

ಈ) ಭ್ + ಆ – ಗ್ + ಯ್

8. ಹೆಚ್ಚು ಉಸಿರಿನಿಂದ ಉಚ್ಚರಿಸಲಾಗುವ ಅಕ್ಷರಗಳೇ ----------

ಅ) ದೀರ್ಘ ಸ್ವರಗಳು

ಆ) ಅಲ್ಪಪ್ರಾಣಗಳು

ಇ) ಮಹಾಪ್ರಾಣಗಳು

ಈ) ಅನುನಾಸಿಕಗಳು

9) **ಯೋಗವಾಹ** ಪದದ ಅರ್ಥ ----------

ಅ) ಯೋಗ್ಯತೆ

ಆ) ಹೋಗು

ಇ) ಜೊತೆಗೂಡಿ ಹೋಗು

ಈ) ಸುಯೋಗ

10. **ಊರಿನ** ಈ ಪದದಲ್ಲಿರುವ ದೀರ್ಘಸ್ವರ ----------

ಅ) ಊ

ಆ) ರ

ಇ) ಇ

ಈ) ಅ

LIVEWORKSHEETS